ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ, ಅವರನ್ನು ಮತ್ತೆ ಸಿ.ಓ.ಡಿ.ಗೆ ಹಾಕಿದ್ದಾರೆ ಎಂದೂ ಹೇಳಿದ್ದಾರೆ. ಸಿ.ಓ.ಡಿಗೆ ಹಾಕಿದ್ದು ನಿಜ. ಅದನ್ನು ನಾವು ತೆಗೆದಿದ್ದೇವೆ, ಸಸ್ಪೆಂಡ್ ಮಾಡಿದ್ದೇವೆ, ಇದನ್ನು ನಾನು ಹೇಳುತ್ತಿದ್ದೇನೆ, ಇದು ಮೊದಲನೆಯದಾಗಿ. ಎರಡನೆಯದಾಗಿ, ಅನೇಕ ಸಂಶಯಗಳನ್ನು ಗೌರವಾನ್ವಿತ ಸದಸ್ಯರುಗಳು ಇಲ್ಲಿ ಹೇಳುತ್ತಿರುವುದರಿಂದ ಒಂದುಂತೂ ಹೇಳುತ್ತೇನೆ, ಪೋಲೀಸರು ನಮ್ಮ ಆಡಳಿತ ಪಕ್ಷದ ಕೈಗೊಂಬೆಗಳಲ್ಲ. We have absolutely no vested interest. Ours is an open government. We are having on open mind. ಸಿ.ಓ.ಡಿ. ಮೂಲತ ತನಿಕೆ ಮಾಡಿಸಿ ಎಂದು ಹೇಳಿದ್ದಾರೆ. ನಾನು ಒಪ್ಪಿಕೊಂಡಿದ್ದೇನೆ. I have already referred this matter to COD.

ಶ್ರೀ ಶಿವಾನಂದ ಎಸ್. ಪಾಟೀಲ್ : ನನ್ನದೊಂದು ಗಮನ ಸೆಳೆಯುವ ಸೂಚನೆ ಇತ್ತು.

ಅಧ್ಯಕ್ಷರು : ಆಯಿತು, ತರಿಸಿ ಕೊಡುತ್ತೇನೆ.

ನಿಯಮ 351ರ ಮೇರೆಗೆ

(ಅ) ಬೆಂಗಳೂರು ನಗರದ ಮಿಂಟೋ ಕಣ್ಣಾಸ್ಪತ್ರೆ ಲೇಸರ್ ಉಪಕರಣದ ದುರಸ್ತಿ.

ಶ್ರೀ ಸುರೇಶ್ ಕುಮಾರ್ (ರಾಜಾಜಿನಗರ ಕ್ಷೇತ್ರ) : ಮಾನ್ಯ ಸಭಾಧ್ಯಕ್ಷರೇ, ಬೆಂಗಳೂರು ನಗರದ ಮಿಂಟೋ ಕಣ್ಣಿನ ಆಸ್ಪತ್ರೆಯಲ್ಲಿ ಲೇಸರ್ ಉಪಕರಣವೊಂದು ಕಳೆದ 2 ವರ್ಷಗಳಿಂದ ಕೆಟ್ಟು ಹೋಗಿದೆ. ಇದರಿಂದ ಮಧುಮೇಹ ಕಾಯಿಲೆಯುಳ್ಳ ಕಣ್ಣಿನ ರೋಗಿಗಳಿಗೆ ವಿಪರೀತ ತೊಂದರೆ ಉಂಟಾಗಿದೆ. ಖಾಸಗಿ ಚಿಕಿತ್ಸಾ ಕೇಂದ್ರಗಳಲ್ಲಿ ಈ ಚಿಕಿತ್ಸೆ ತುಂಬಾ ದುಬಾರಿಯಾಗಿದ್ದು, ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದ ಜನತೆಗೆ ದುಸ್ತರವಾಗಿದೆ. ಲೇಸರ್ ಉಪಕರಣದ ದುಸ್ಥಿತಿಯ ಬಗ್ಗೆ ಸಂಬಂಧಪಟ್ಟವರ ಗಮನ ಸೆಳೆದಿದದರೂ ಇದುವರೆಗೆ ರಿಪೇರಿ ಆಗಿಲ್ಲ. ಕೂಡಲೇ ಅಗತ್ಯ ಕ್ರಮ ಜರುಗಿಸಿ ಪ್ರತಿದಿನ ನೂರಾರು ಬಡರೋಗಿಗಳಿಗೆ ಅಗತ್ಯವಿರುವ ಈ ಉಪಕರಣ ಮತ್ತೆ ಸಿದ್ಧಗೊಳ್ಳುವಂತೆ ಮಾಡಬೇಕೆಂದು ವೈದ್ಯಕೀಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಮಿಂಟೋ ಕಣ್ಣಾಸ್ಪತ್ರೆಯಲ್ಲಿ ಇರುವ ಲೇಸರ್ ಉಪಕರಣವನ್ನು 6 ವರ್ಷಗಳ ಹಿಂದೆ ಖರೀದಿಸಿದ್ದು, ಯಾವುದೇ ತೊಂದರೆಯಿಲ್ಲದೆ ಕಾರ್ಯ ನಿರ್ವಹಿಸಿರುತ್ತದೆ. ಈ ಉಪಕರಣವು ಕಳೆದ ವರ್ಷ ಮಾರ್ಚಿ 1995 ರಿಂದ ಕೆಟ್ಟು ಹೋಗಿರುತ್ತದೆ. ಈ ಉಪಕರಣವು ದುರಸ್ತಿ ಮಾಡಿಸಲು 17,820 ಯು.ಎಸ್. ಡಾಲರಗಳು (ಭಾರತೀಯ ಹಣ ಸುಮಾರು ರೂ. 6,23,700-00ಗಳು ಬೇಕಾಗಿರುತ್ತದೆ) ಈ ಹಣವನ್ನು ಸರ್ಕಾರದ ವತಿಯಿಂದ ಬಿಡುಗಡೆ ಮಾಡಲಾಗಿದೆ.

ಮೇಲಿನ ಉಪಕರಣವನ್ನು ಮೆಸರ್ಸ್ ಲೇಸರ್ ಫನ್‌ಲೆಂಡ್ ಸಂಸ್ಥೆಯಿಂದ ದುರಸ್ಥಿ ಮಾಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಕೂಡಲೇ ದುರಸ್ತಿ ಮಾಡಿಸಿ, ಸಾರ್ವಜನಿಕರ ಉಪಯೋಗಕ್ಕೆ ಒದಗಿಸಲಾಗುವುದು.

ಶ್ರೀ ಜೆ.ಎ. ಫರ್ನಾಂಡಿಸ್ : ಅಧ್ಯಕ್ಷರೇ, ನಾನು ಇಂಗ್ಲೀಷಿನಲ್ಲಿ ಮಾತನಾಡುತ್ತೇನೆ.

ಅಧ್ಯಕ್ಷರು : ಮಾತನಾಡಿ, ತೊಂದರೆಯಿಲ್ಲ.

(ಆ) ಫ್ಲಾಟ್ಸ್‌ಗಳ ಅಂಡರ್ ವ್ಯಾಲ್ಯುಯೇಷನ್ ನೋಂದಣಿ ಬಗ್ಗೆ

ಶ್ರೀ ಜೆ.ಎ. ಫರ್ನಾಂಡಿಸ್ : Mr. Speaker Sir, Considerable loss of revenue to government due to undervaluation of flats in Bangalore city. From time to time, advertisements have been appearing...

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಇಂಗ್ಲೀಷನಲ್ಲಿ ಮಾತನಾಡುವುದಕ್ಕೆ ಅವರಿಗೆ ತಾವು ಅನುಮತಿಯನ್ನು ಕೊಡುತ್ತಿದ್ದೀರಿ. ಅವರಿಗೆ ಕನ್ನಡ ಬರುತ್ತದೆ. ದಯವಿಟ್ಟು ಕನ್ನಡದಲ್ಲಿ ಮಾತನಾಡಲು ಹೇಳಿ.

ಅಧ್ಯಕ್ಷರು : ಜೆ.ಎ. ಫರ್ನಾಂಡಿಸ್‌ರವರಿಗೆ ಕನ್ನಡ ಬರುತ್ತದೆ ಎಂದು ನೀವು ಹೇಳುವುದಾದರೆ ಇನ್ನು ದೇವರೇ ಕಾಪಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಕನ್ನಡ ಬರುತ್ತದೆ ಅವರಿಗೆ.

ಅಧ್ಯಕ್ಷರು : ಮಾತನಾಡುವುದಕ್ಕೆ ಆಗುತ್ತದೆ. ಓದುವುದಕ್ಕೆಲ್ಲಾ ಬರುತ್ತದೆಯೇ? ಅವರು ಈ ಸದನದ ನಾಮಿನೇಟರ್ ಸದಸ್ಯರು, ಆಂಗ್ಲೋ ಇಂಡಿಯನ್ ಕಮ್ಯೂನಿಟಿಯಿಂದ ಬರುತ್ತಾರೆ. ಅವರು ಇಲ್ಲಿ ಬಂದಿರುವುದೇ ಈ ಕಾರಣಕ್ಕಾಗಿ. ಅವರಿಗೆ ಕನ್ನಡ ಓದುವುದಕ್ಕೆ ಬರುವ ಹಾಗಿದ್ದರೆ ನನ್ನದೇನೂ ಆಕ್ಷೇಪಣೆ ಇಲ್ಲ. ನಾನು ಹಷ್ಮಿ ಕೈಯಲ್ಲಿ ಕನ್ನಡದಲ್ಲಿ ಮಾತನಾಡಿಸಲು ಪ್ರಯತ್ನ ಪಡುತ್ತೇನೆ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಇತ್ತೀಚಿನ ದಿನಗಳಲ್ಲಿ ಇಂಗ್ಲೀಷ್ ಜಾಸ್ತಿಯಾಗುತ್ತಿದೆ, ಕನ್ನಡ ಸಾಯುತ್ತಿದೆ.

ಅಧ್ಯಕ್ಷರು : ಏನೂ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ಕನ್ನಡ ಬರುತ್ತದೆ, ನನ್ನ ಜೊತೆಯಲ್ಲಿ ಕನ್ನಡದಲ್ಲಿ ಮಾತನಾಡುತ್ತಾರೆ.

ಒಬ್ಬ ಮಾನ್ಯ ಸದಸ್ಯರು : ಅವರು ಕನ್ನಡದಲ್ಲಿ ಮಾತನಾಡಲು ತಯಾರಿದ್ದಾರೆ. ಅವರಿಗೆ ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಇದು ಭಾವೋದ್ವೇಗದಿಂದ ಪ್ರಶ್ನೆಯನ್ನು ಬಗೆಹರಿಸತಕ್ಕಂಥಾದ್ದಲ್ಲ. ಸಾಮಾನ್ಯವಾಗಿ ಅವರನ್ನು ನೀವು ನೇರವಾಗಿ ಓದಬಹುದು ಎಂದು ಹೇಳಿ ಬಿಟ್ಟರೆಲ್ಲ, ಅದು ನನಗೆ ತಕ್ಷಣ ಶಾಕ್ ಆಯಿತು.